# ಕರ್ನಾಟಕ ಜೀವವೈವಿಧ್ಯ ಮಂಡಳಿ

# Karnataka Biodiversity Board

## 36ನೇ ಮಂಡಳಿ ಸಭೆಯ ಕಾರ್ಯಸೂಚಿಗಳು

## Agenda notes for 36th Board Meeting

**36/1 – ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಅಧ್ಯಕ್ಷರ ನೇಮಕಾತಿ:**

ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಸರ್ಕಾರದ ಆದೇಶ ಸಂ ಅಪಜೀ 249 ಇಎನ್‌ವಿ 2016 23/08/2017ರಂದು ಶ್ರೀ ಎಸ್. ಪಿ. ಶೇಷಾದ್ರಿರವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಅಧ್ಯಕ್ಷರು ದಿನಾಂಕ 24/08/2017ರಂದು ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ.

ಈ ವಿಷಯವನ್ನು ಮಂಡಳಿಗೆ ಮಾಹಿತಿಗಾಗಿ ಮಂಡಿಸಲಾಗಿದೆ.

### 36/1 - Appointment of Chairman to Karnataka Biodiversity Board:

Government of Karnataka Vide order No:FEE 249 ENV 2016 (Part-2), dated 23/08/2017 has appointed Shri. S.P.Sheshadri as the Chairman of Karnataka Biodiversity Board. He has taken charge on 24/08/2017.

The matter is placed before the Board for information.

**36/2 – 35ನೇ ಮಂಡಳಿ ಸಭೆಯ ನಡವಳಿಗಳನ್ನು ಓದುವುದು ಮತ್ತು ದಾಖಲಿಸುವುದು:**

ದಿನಾಂಕ 22/08/2017ರಂದು ಜರುಗಿದ ಮಂಡಳಿಯ 35ನೇ ಸಭೆಯ ನಡವಳಿಗಳನ್ನು ಎಲ್ಲಾ ಸದಸ್ಯರಿಗೆ ದಿನಾಂಕ 31/08/2017ರಂದು ರವಾನಿಸಲಾಗಿದ್ದು, ಅದರಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ (ಮುಖ್ಯಸ್ಥರು ಅರಣ್ಯ ಕಾರ್ಯಪಡೆ) ಸಲಹೆಯ ಮೇರೆಗೆ ಅಜೆಂಡಾ ಸಂ 35/13ರನ್ನು ಪರಿಷ್ಕರಿಸಿ ನಡವಳಿಯನ್ನು ಎಲ್ಲಾ ಸದಸ್ಯರಿಗೆ ದಿನಾಂಕ 11/09/2017ರಂದು ರವಾನಿಸಲಾಗಿರುತ್ತದೆ. ಸದಸ್ಯರಿಂದ ಯಾವುದೇ ಸಲಹೆ ಅಥವಾ ತಿದ್ದುಪಡಿ ಬಂದಿರುವುದಿಲ್ಲದ ಕಾರಣ ಈ ನಡವಳಿಗಳನ್ನು ಓದಿ ದಾಖಲಿಸಲಾಗಿದೆ. **(ಅನುಬಂಧ– I)**

### 36/2 - Reading and recording of the proceedings of 35th Board Meeting:

The proceedings of the 35th Board meeting held on 22/08/2017 were communicated to all the members on 31/08/2017. As per the advice of the Principal Chief Conservator of Forests (HoFF) Agenda No. 35/13 has been revised and circulated to all the members on 11/09/2017. As there were no comments from the members. The proceedings may be adopted **(Annexure-I)**

**36/3 - 35ನೇ ಮಂಡಳಿ ಸಭೆಯ ನಡವಳಿಯ ಮೇಲೆ ಕೈಗೊಂಡ ಕ್ರಮಗಳು:**

35ನೇ ಮಂಡಳಿ ಸಭೆಯ ನಡವಳಿಯ ಮೇರೆಗೆ ಕೈಗೊಂಡ ಕ್ರಮಗಳನ್ನು ಸಭೆಗೆ ಮಂಡಿಸಲಾಗಿದೆ. **(ಅನುಬಂಧ–II)**

**36/3 - Action taken on 35th Board meeting proceedings:**

Action taken on the proceedings of 35th Board meeting is placed in **(Annexure-II)**

ಬಳಕೆ ಮತ್ತು ಲಾಭ ಹಂಚಿಕೆಗಳ ವಿಷಯ ಕುರಿತು 35ನೇ ಮಂಡಳ ಸಭೆಯಲ್ಲಿ ಚರ್ಚಿಸಿದ ವಿಷಯಗಳನ್ನು ಮುಂದುವರೆಸಲಾಗಿದೆ.

**Continued subjects on ABS of 35th Board Meeting:**

**35/2/A/2 – ಸುಸ್ಥಿರ ಬಳಕೆ ಹಾಗೂ ಲಾಭಗಳ ನ್ಯಾಯಸಮ್ಮತ ಹಂಚಿಕೆ ಕುರಿತು ಹಣ ಬಳಕೆ:**

ಮಂಡಳ ಸಭೆಯ ನಿರ್ಣಯದಂತೆ, ದಿನಾಂಕ 20/09/2017ರಂದು ನಡೆದ ಬಳಕೆ ಮತ್ತು ಲಾಭ ಹಂಚಿಕೆಗಳ ಪರಿಣಿತಿ ಸದಸ್ಯರ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿ ನಿರ್ಣಯಿಸಿದಂತೆ ರಾಜ್ಯದ 4 ಸಮೃದ್ಧ ಜೈವಿಕ ಸಂಪನ್ಮೂಲಗಳನ್ನೊಳಗೊಂಡ ತಾಲ್ಲೂಕುಗಳಲ್ಲಿರುವ ಸಸ್ಯ ಪ್ರಭೇಧಗಳ ಪಟ್ಟಿಯನ್ನು ತಯಾರಿಸಿ ಜೈವಿಕ ಸಂಪನ್ಮೂಲಗಳ ಸಂರಕ್ಷಣೆ ಹಾಗು ಸುಸ್ಥಿರ ಬಳಕೆಗಳ ನಿರ್ಧಿಷ್ಟ ವಿಧಾನಗಳನ್ನು ಅಭಿವೃದ್ಧಿಪಡಿಸಲಾಗಿದೆ. **(ಅನುಬಂಧ–III)**

ದಿನಾಂಕ: 07/12/2017ರಂದು ಬಂಟವಾಳ ತಾಲ್ಲೂಕಿನ ಜೀವವೈವಿಧ್ಯ ನಿರ್ವಹಣಾ ಸಮಿತಿಗೆ ಪರಿಣಿತಿ ಸಮಿತಿಯ ಸದಸ್ಯರು ಕ್ಷೇತ್ರ ಭೇಟಿ ಕೈಗೊಂಡು ಅಲ್ಲಿನ ಜೀವವೈವಿಧ್ಯ ನಿರ್ವಹಣಾ ಸಮಿತಿಯ ಸದಸ್ಯರೊಂದಿಗೆ ಬಳಕೆ ಮತ್ತು ಲಾಭದ ಹಣ ಹಂಚಿಕೆಯ ಕುರಿತು ಚರ್ಚಿಸಿ ವಿಸ್ತೃತ ಮಾರ್ಗಸೂಚಿಗಳನ್ನು ಅಭಿವೃದ್ಧಿಪಡಿಸಿ ಅವುಗಳನ್ನು ನಾಲ್ಕು ತಾಲ್ಲೂಕುಗಳಲ್ಲಿ ಅಳವಡಿಸಲು ತಿಳಿಸಲಾಯಿತು.

ಈ ವಿಷಯವನ್ನು ಮಂಡಳಿಯ ಮುಂದಿನ ಕ್ರಮ ಹಾಗೂ ಚರ್ಚೆಗಾಗಿ ಮಂಡಿಸಲಾಗಿದೆ. **(ಅನುಬಂಧ–IV)**

**35/2/A/2 - ABS money dispersal:**

As resolved by the Board, the matter was discussed and reviewed in the meeting of the Expert Committee on ABS Dispersal, held on 20th September 2017. The recommendations of the committee and the plant species list for each of the four biodiversity rich taluks were shortlisted to develop specific modalities for the conservation and sustainable utilization of the bio-resources. **(ANNEXURE-III)**

Field visit to Bantwal Taluk was undertaken by the Expert committee members on 7th Dec 2017 for interaction with the BMC members and to develop broad guidelines for ABS dispersal which may be adopted by all the four talukas.

The report is put up for further deliberation and discussion by the Board. **(ANNEXURE-IV)**

**35/2/A /5 - ಬಳಕೆ ಮತ್ತು ಲಾಭ ಹಂಚಿಕೆಗಳ ವಿಕೇಂದ್ರೀಕರಣ ಪರಿಣಿತಿ ಸಮಿತಿಯ ಅನುಷ್ಠಾನ ವರದಿ:**

ಮಂಡಳಿ ಸಭೆಯ ನಿರ್ಣಯದಂತೆ, ದಿನಾಂಕ07/09/2017ರಂದು ನಡೆದ ಬಳಕೆ ಮತ್ತು ಲಾಭ ಹಂಚಿಕೆಗಳ ವಿಕೇಂದ್ರೀಕರಣ ಪರಿಣಿತಿ ಸಮಿತಿಯ ಪ್ರಸ್ತಾವನೆಯ ಮರು ಕರಡನ್ನು ರಚಿಸಲಾಯಿತು. ಪರಿಣಿತಿ ಸಮಿತಿಯು ಅನುಮೋದಿಸಲಾದ ಕರಡು ಪ್ರಸ್ತಾವನೆಯ ವಿಕೇಂದ್ರೀಕರಣದ ನಿಮಯಗಳನ್ನು ಮಂಡಳಿಗೆ ಮುಂದಿನ ಕ್ರಮಕ್ಕಾಗಿ ಮಂಡಿಸಲಾಗಿದೆ. **(ಅನುಬಂಧ-V)**

**35/2/A /5 - Report of the Expert Committee on Decentralization of ABS Implementation:**

As resolved by the Board, meeting of the Expert Committee on Decentralization of ABS Implementation was held on 7th September 2017 to re-draft the proposal. The proceedings of the meeting and the draft proposal of the Regulations for the Decentralisation as recommended by the Expert committee is put up for further deliberation by the Board **(ANNEXURE-V).**

**35/2/A/7 - ಬಳಕೆ ಮತ್ತು ಲಾಭ ಹಂಚಿಕೆಯ ನಿಯಮಗಳು: ಶ್ರೀ ಆರ್. ಎಂ.ಎನ್ ಸಹಾಯ್, ಮಾಜಿ ಅಧ್ಯಕ್ಷರು. ಭಾ.ಅ.ಸೇ ರವರಿಂದ ಅಪರ ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಜೀವಿಪರಿಸ್ಥಿತಿ ಹಾಗು ಪರಿಸರರವರಿಗೆ ಬರೆದ ಪತ್ರ:**

ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು 2005ರ ಕಾರ್ಯಸೂಚಿ ತಿದ್ದುಪಡಿಯ ಶೀರ್ಷಿಕೆಯನ್ನು 'ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು 2005ರ ತಿದ್ದುಪಡಿ' ಎಂದು ಬದಲಾಯಿಸಲಾಯಿತು.

ಮಂಡಳಿ ಸಭೆಯ ನಿರ್ಣಯದಂತೆ, ದಿನಾಂಕ 17/10/2017ರಂದು ನಡೆದ ಬಳಕೆ ಮತ್ತು ಲಾಭ ಹಂಚಿಕೆಗಳ ಪರಿಣಿತಿ ಸಮಿತಿ ಸಭೆಯ ಉಪ ಸಮಿತಿಯಲ್ಲಿ 'ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು 2005ರ ತಿದ್ದುಪಡಿ ಎಂದು ಪರಿಶೀಲಿಸಿ ಅನುಮೋದಿಸಲಾಯಿತು. (ಕೆಬಿಡಿ ರೂಲ್ಸ್, 2005.)

ಸಮಿತಿಯ ಸಲಹೆಯಂತೆ ಸಭೆಯ ನಡವಳಿಯೊಂದಿಗೆ 'ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು 2005ರ ತಿದ್ದುಪಡಿ'ಯ ಕ್ರೋಢಿಕೃತ ವರದಿಯನ್ನು ಮಂಡಳಿಗೆ ಮುಂದಿನ ಕ್ರಮಕ್ಕಾಗಿ ಮಂಡಿಸಲಾಗಿದೆ. **(ಅನುಬಂಧ-VI)**

**35/2/A/7. ABS Regulations: Letter of the Ex-chairman, Mr. R.M.N. Sahai, IFS (retd.) to ACS, FEE:**

Since the matter is regarding the requirement of amendments, the agenda title is modified to **'Amendments to the Karnataka Biological Diversity Rules, 2005'**

As resolved by the Board, a sub-committee of the Expert Panel on ABS met on 17th Oct 2017 to review and recommend the amendments to the Karnataka Biological Diversity Rules, 2005 (KBD Rules, 2005).

The proceedings of the meeting with the consolidated report on the amendments to the KBD Rules, 2005, as suggested by the Committee, is put up for deliberation of the Board **(ANNEXURE-VI).**

**36/4. : ಜೈವಿಕ ವೈವಿಧ್ಯ ಅಧಿನಿಯಮ 2002ರ ಪ್ರಕರಣ 7ರಂತೆ ರಾಜ್ಯ ಜೀವವೈವಿಧ್ಯ ಮಂಡಳಿಗಳು ಜೈವಿಕ ಸಂಪನ್ಮೂಲಗಳ ಬಳಕೆಯ ಅರ್ಜಿಗಳ ಪ್ರಕ್ರಿಯೆಯ ಕಾರ್ಯಾಚರಣೆಯ ಮಾರ್ಗಸೂಚಿಗಳ ಕರಡನ್ನು ಸ್ವೀಕರಿಸಲಾಯಿತು – ಕಾರ್ಯಾಚರಣೆಯ ಮಾರ್ಗಸೂಚಿಗಳ ಕರಡಿನ ಬಗ್ಗೆ ಕರ್ನಾಟಕ ಜೀವವೈವಿಧ್ಯ ಮಂಡಳಿಯು ಹೇಳಿಕೆಗಳನ್ನು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರಕ್ಕೆ ಕಳುಹಿಸಲಾಯಿತು** :

ದಿನಾಂಕ 17/10/2017ರಂದು ನಡೆದ ಬಳಕೆ ಮತ್ತು ಲಾಭ ಹಂಚಿಕೆಯ ಪರಿಣಿತಿ ಸಮಿತಿಯ ಉಪ ಸಮಿತಿ ಸಭೆಯಲ್ಲಿ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರದ ಮುಖಾಂತರ ಕಳುಹಿಸಲ್ಪಟ್ಟ ರಾಜ್ಯ ಜೀವವೈವಿಧ್ಯ ಮಂಡಳಿಗಳು ಸ್ವೀಕರಿಸಿದಂತಹ ಜೈವಿಕ ಸಂಪನ್ಮೂಲಗಳ ಬಳಕೆಯ ಅರ್ಜಿಗಳ ಪ್ರಕ್ರಿಯೆಯ ಕಾರ್ಯಾಚರಣೆಯ ಮಾರ್ಗಸೂಚಿಗಳ ಕರಡನ್ನು ಪರಿಶೀಲಿಸಲಾಯಿತು.

ದಿನಾಂಕ 25/10/2017ರೊಳಗಾಗಿ ಈ ಮಾರ್ಗಸೂಚಿಕೆಗಳ ಬಗ್ಗೆ ಹೇಳಿಕೆಗಳನ್ನು ಕಳುಹಿಸಲು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು ಸಮಯವನ್ನು ನಿಗಧಿಗೊಳಿಸಿತ್ತು. ಈ ಬಗ್ಗೆ ಹೇಳಿಕೆಗಳನ್ನು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರಕ್ಕೆ ದಿನಾಂಕ 24/10/2017ರಂದು ಕಳುಹಿಸಲಾಯಿತು.

**36/4. Draft operational guidelines to the State Biodiversity Boards for processing of applications for access to biological resources received under Section 7 of the Biological Diversity Act, 2002 - comments of KBB on the draft guidelines forwarded by the National Biodiversity Authority:**

The sub-committee of the Expert Panel on ABS met on 17th Oct 2017 to review the draft operational guidelines on processing of ABS applications by the State Biodiversity Boards, which was forwarded by the NBA.

Since the timeline provided by the NBA for the comments was only till 25th October 2017, the comments of the sub-committee on the draft operational guidelines was sent to the National Biodiversity Authority on 24/10/2017.

The same is put up for validation of the Board.

**36/5 – ದಿನಾಂಕ 7-8 ನವೆಂಬರ್ 2017ರಂದು ಚನ್ನೈನಲ್ಲಿ ನಡೆದ ರಾಜ್ಯ ಜೀವವೈವಿಧ್ಯ ಮಂಡಳಿಗಳ 12ನೇ ವಾರ್ಷಿಕ ಸಭೆಯಿಂದ ಹೊರಬಂದ ಅಂಶಗಳು**:

ದಿನಾಂಕ 7-8 ನವೆಂಬರ್ 2017ರಂದು ಚನ್ನೈನಲ್ಲಿ ನಡೆದ ರಾಜ್ಯ ಜೀವವೈವಿಧ್ಯ ಮಂಡಳಿಗಳ 12ನೇ ವಾರ್ಷಿಕ ಸಭೆಯ ವರದಿಯನ್ನು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚನ್ನೈರವರು ಕಳುಹಿಸಿರುತ್ತಾರೆ. ಈ ಸಭೆಯಲ್ಲಿ ಚರ್ಚಿಸಿದಂತೆ ಕೈಗೊಳ್ಳಬೇಕಾದ ಕೆಲವು ಅಂಶಗಳ ಪಟ್ಟಿಯನ್ನು ತಯಾರಿಸಿದೆ.

ಈ ವಿಷಯದ ಬಗ್ಗೆ ಕರ್ನಾಟಕ ಜೀವವೈವಿಧ್ಯ ಮಂಡಳಿಯು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಲಹೆಗಳನ್ನು ನೀಡಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲು ಪ್ರಸ್ತಾವನೆಯನ್ನು ಮಂಡಳಿಗೆ ಸಲ್ಲಿಸಲಾಗಿದೆ. **(ಅನುಬಂಧ-VII)**

1. ಡಾ. ನಿರಂಜನಮೂರ್ತಿ – ಅಧ್ಯಕ್ಷರು
2. ಡಾ. ಸುಹಾಸ್ ನಿಂಬಾಳಕರ್ – ಸದಸ್ಯರು
3. ಉಪ ನಿರ್ದೇಶಕರು (ತೋಟಗಾರಿಕೆ) – ಸದಸ್ಯರು
4. ಸಮಾಲೋಚಕರು (ಎ.ಬಿ.ಎಸ್) – ಸಂಚಾಲಕರು

**36/5: Outcome of the 12th Annual meet of the State Biodiversity Boards held on 7-8 November 2017 at Chennai:**

The National Biodiversity Authority, Chennai has sent a report on the 12th Annual meeting of SBBs held on 7-8th November 2017. Based on the discussions held, certain action points were listed.

The same is placed before the Board with a proposal to constitute a committee to look into the action points and suggest measures to be taken by KBB. **(ANNEXURE-VII).**

**The proposed committee members are:**

1. Dr. Niranjana Murthy - Chairman.
2. Dr. Suhas Nimbalkar - Member
3. Deputy Director (Horticulture) – Member
4. ABS Consultant - Convener

**36/6: ಅಧ್ಯಕ್ಷರಿಗೆ ಆಪ್ತ ಸಹಾಯಕರು ಹಾಗೂ ವಾಹನ ಚಾಲಕರ ಅವಶ್ಯಕತೆ ಬಗ್ಗೆ:**

ಮಂಡಳಿಗೆ 4 ವಾಹನ ಚಾಲಕರ ಹುದ್ದೆಯನ್ನು ಮಂಜೂರು ಮಾಡಿದ್ದು 3 ಚಾಲಕರ ಹುದ್ದೆಯು ಭರ್ತಿಯಾಗಿರುತ್ತದೆ. ಅದರಲ್ಲಿ ಒಂದು ಹುದ್ದೆ ಖಾಲಿಯಿರುತ್ತದೆ. ಅಧ್ಯಕ್ಷರು ಕರ್ನಾಟಕ ರಾಜ್ಯಾದಂತ ವ್ಯಾಪಕವಾಗಿ ಪ್ರವಾಸ ಕೈಗೊಳ್ಳಲ್ಲಿರುವ ಹಿನ್ನಲೆಯಲ್ಲಿ ಇಬ್ಬರು ವಾಹನ ಚಾಲಕರ ಅವಶ್ಯಕತೆಯಿರುತ್ತದೆ. ಆದುದರಿಂದ ದಿನಾಂಕ 12/09/2017ರಿಂದ ಹೊರಗುತ್ತಿಗೆ ಆಧಾರದ ಮೇಲೆ ಒಬ್ಬರು ಚಾಲಕರನ್ನು ನೇಮಕ ಮಾಡಿಕೊಳ್ಳಲಾಗಿರುತ್ತದೆ. ಹಾಗೆಯೇ ಅಧ್ಯಕ್ಷರಿಗೆ ಒಬ್ಬರು ಆಪ್ತ ಸಹಾಯಕರ ಅವಶ್ಯಕತೆ ಇರುತ್ತದೆ. ಈ ವಿಷಯವಾಗಿ ಸರ್ಕಾರಕ್ಕೆ ದಿನಾಂಕ 24/10/2017ರ ಪತ್ರದಲ್ಲಿ ಅಧ್ಯಕ್ಷರ ಸೇವಾ ಷರತ್ತುಗಳು ಹಾಗು ನಿಬಂಧನೆಗಳನ್ನು ಕಳುಹಿಸಲು ಕೋರಲಾಗಿರುತ್ತದೆ. **(ಅನುಬಂಧ-VIII)** ಸರ್ಕಾರದಿಂದ ಉತ್ತರದ ನಿರೀಕ್ಷೆಯಲ್ಲಿದೆ.

ಈ ವಿಷಯವನ್ನು ಮಂಡಳಿಗೆ ಮಾಹಿತಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**36/6 - Personal Assistant and Driver for Chairman:**

Out of the sanctioned 4 posts of drivers in the Board, three posts are filled and one post is vacant. Since the Chairman has extensive travels throughout the State, he requires a driver for the purpose. Hence a second driver for the Chairman has been appointed on outsource basis from 12/09/2017 against the one vacant post. Further, a personal assistant is also required for Chairman. A letter was sent to the Government requesting for the service

provisions and conditions of Chairman on 24/10/2017. **(ANNEXURE-VIII).** Reply is awaited from the Government in this matter.

The subject is placed before the Board for information and approval.

**36/7- 2016–17ನೇ ಸಾಲಿನ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಲೆಕ್ಕಶೀರ್ಷಿಕೆಯ ಪ್ರತ್ಯೇಕ ಆಡಿಟ್ ವರದಿ.**

ಕಂಪಟ್ರೋಲರ್ ಹಾಗು ಆಡಿಟ್ ಜನರಲ್ ಆಫ್ ಇಂಡಿಯಾದ 2016–17ನೇ ಸಾಲಿನ ಕರ್ನಾಟಕ ಜೀವವೈವಿಧ್ಯ ಮಂಡಳಿಯ ಲೆಕ್ಕಶೀರ್ಷಿಕೆಯ ಪ್ರತ್ಯೇಕ ಆಡಿಟ್ ವರದಿಯನ್ನು ಮಹಾ ಲೇಖಪಾಲಕರು, ಕರ್ನಾಟಕರವರು ದಿನಾಂಕ 31/10/2017ರಂದು ಸಲ್ಲಿಸಿರುತ್ತಾರೆ. ವರದಿಯನ್ನು ಮಂಡಳಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ **(ಅನುಬಂಧ–IX)**

**36/7 - Separate Audit report on the accounts of Karnataka Biodiversity Board for the year 2016-17.**

Separate Audit report of the Comptroller and Auditor General of India on the accounts of the Karnataka Biodiversity Board, Bengaluru for the year 2016-17 submitted by Accountant General (E&RSA), Karnataka on 31/10/2017 is placed as **(ANNEXURE-IX)** before the Board for information.

**36/8 – ಜೈವಿಕವೈವಿಧ್ಯ ಅಧಿನಿಯಮ 2002 ಪ್ರಕರಣ 40ರಡಿಯಲ್ಲಿ ನವೀಕರಿಸಿದ ಸಾಮಾನ್ಯ ಸರಕು ಪದಾರ್ಥಗಳ ನವೀಕರಣಗೊಂಡ ಪಟ್ಟಿ**

ಜೈವಿಕವೈವಿಧ್ಯ ಅಧಿನಿಯಮ 2002 ಪ್ರಕರಣ 40ರಡಿಯಲ್ಲಿ ಅಧಿಕಾರದ ವ್ಯಾಪ್ತಿಯೊಂದಿಗೆ ಕೇಂದ್ರ ಸರ್ಕಾರ (ಎಂ.ಒ.ಇ.ಎಫ್_ ಸಿ.ಸಿ)ದ ಸಂಪರ್ಕದ ಮೇರೆಗೆ ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವು ಸಾಮಾನ್ಯ ಸರಕು ಪದಾರ್ಥಗಳ ನವೀಕರಣಗೊಳಸಿದ ಪಟ್ಟಿಯ ಒಟ್ಟು 421 ಪ್ರಬೇಧಗಳ ಅಧಿಸೂಚನೆಯನ್ನು (ಅಧಿಸೂಚನೆಯ ಸಂ ಎಸ್.ಒ. 3533 (ಎ) ದಿನಾಂಕ **7/11/2017)** ಹೊರಡಿಸಿದೆ. (ಮೊದಲ ಪಟ್ಟಿಯಲ್ಲಿ ಒಟ್ಟು 385 ಪ್ರಬೇಧಗಳಿದ್ದವು) **(ಅನುಬಂಧ–X)**

ಈ ವಿಷಯವನ್ನು ಮಂಡಳಿಯ ಮಾಹಿತಿಗಾಗಿ ಮಂಡಿಸಲಾಗಿದೆ.

**36/8 - Update to the list of Normally Traded as Commodities (NTAC) under Section 40 of the BD Act, 2002:**

In exercise of powers conferred under section 40 of the BD Act, the Central Government (MoEF-CC) in consultation with the National Biodiversity Authority has issued a notification (vide notification S.O. 3533 (E) dt 7$^{th}$ Nov 2017) augmenting the list of NTAC to a total of 421 species (from an earlier total of 385) **(ANNEXURE -X)**

The matter is placed before the Board for information.

**36/9- UNEP-GEF-MoEF-ABS ಪ್ರಾಜೆಕ್ಟ್ 'ಜೈವಿಕವೈವಿಧ್ಯತೆಯ ಅಧಿನಿಯಮದ ಅನುಷ್ಠಾನವನ್ನು ಬಲಪಡಿಸುವುದು ಮತ್ತು ನಿಯಮಗಳು ಅದರ ಬಳಕೆ ಮತ್ತು ಲಾಭದ ಹಂಚಿಕೆ ನಿಬಂಧನೆಗಳ ಮೇಲೆ ಕೇಂದ್ರಿಕರಿಸಿದೆ.**

1. **ಕನ್ನಡ ಕೈಪಿಡಿ :**

UNEP-GEF-MoEF-ABS ಯೋಜನೆಯಡಿಯಲ್ಲಿ ಕರ್ನಾಟಕ ಜೀವವೈವಿಧ್ಯ ಮಂಡಳಿಯು ಹತ್ತು ಪುಟಗಳ ಕೈಪಿಡಿಯನ್ನು ಕನ್ನಡದಲ್ಲಿ ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಲಾಗಿದೆ. ಇದು ಜೀವವೈವಿಧ್ಯ ಕಾಯ್ದೆ 2002 ಮತ್ತು ಎಬಿಎಸ್‌ನ್ನು ಅರ್ಥೈಸಿಕೊಳ್ಳುವಲ್ಲಿ ಸೂಕ್ತ ಉಲ್ಲೇಖವಾಗಿ ಕಾರ್ಯನಿರ್ವಹಿಸುತ್ತದೆ. ಈ ವಿಷಯವನ್ನು ಮಂಡಳಿಯ ಮಾಹಿತಿಗಾಗಿ ಸಲ್ಲಿಸಲಾಗಿದೆ.

2. **ಎಬಿಎಸ್ ಕೈಪಿಡಿ :**

ಎಬಿಎಸ್-ಕೈಪಿಡಿಯು ಚಿತ್ರಾತ್ಮಕ/ಗ್ರಾಫಿಕಲ್ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ಸುಲಭವಾಗುವಂತೆ ಎನ್‌ಬಿಎ ಮತ್ತು ಕೆಬಿಬಿಯಿಂದ ಅನ್ವಯಿಕೆಗಳನ್ನು ಪರಿಶೀಲಿಸುವಲ್ಲಿ ಒಳಗೊಂಡಿರುವ ಪ್ರಕ್ರಿಯೆಗಳ ಸಂಕ್ಷಿಪ್ತ ಸಾರಾಂಶವನ್ನು ನೀಡುತ್ತದೆ. ಈ ಕೈಪಿಡಿಯು ಬಳಸಿದ ಪರಿಭಾಷೆಗಳ ವ್ಯಾಖ್ಯಾನಗಳು ಮತ್ತು ಲಭ್ಯವಿರುವ ರೂಪಗಳ ಸ್ನ್ಯಾಪ್‌ಶಾಟ್‌ಗಳನ್ನು (Snap shot) ಸಹ ನೀಡುತ್ತದೆ. ಮಂಡಳಿಯ ಮಾಹಿತಿಗಾಗಿ ಇದನ್ನು ಸಲ್ಲಿಸಲಾಗಿದೆ.

3. **ಅಂತರರಾಜ್ಯ ಬಿಎಂಸಿ ಸದಸ್ಯರ ವಿನಿಮಯ ಭೇಟಿ :**

ಕರ್ನಾಟಕ ಜೀವವೈವಿಧ್ಯ ಮಂಡಳಿಯ UNEP-GEF-MoEF-ABS ಯೋಜನೆಯಡಿ ಕರ್ನಾಟಕದ ಇಪ್ಪತ್ತು ತಾಲ್ಲೂಕು ಪಂಚಾಯತ್ ಬಿಎಂಸಿ ಸದಸ್ಯರಿಗೆ 26 ಮತ್ತು 27ನೇ ಸೆಪ್ಟೆಂಬರ್-2017 ರಂದು ಎರಡು ದಿನಗಳ ಅಂತರರಾಜ್ಯ ಬಿಎಂಸಿ ವಿನಿಮಯ ಭೇಟಿ ಹಮ್ಮಿಕೊಂಡಿತ್ತು. ಈ ವಿನಿಮಯ ಭೇಟಿಯ ಉದ್ದೇಶ, ಸದಸ್ಯರು ಕೇರಳ ರಾಜ್ಯದ ಆಚರಣೆಗಳ (Practices) ಬಗ್ಗೆ ಉತ್ತಮ ತಿಳುವಳಿಕೆಯನ್ನು ಪಡೆಯಲು ಮತ್ತು ಜೀವವೈವಿಧ್ಯತೆಯ ನಿರ್ವಹಣಾ ಸಮಿತಿಗಳ ಸಕ್ರಿಯ ಪಾತ್ರವನ್ನು ಜೈವಿಕವೈವಿಧ್ಯತೆಯ ಅಧಿನಿಯಮ 2002ರ ಮೂರು ಉದ್ದೇಶಗಳನ್ನು ಕಾರ್ಯಗತಗೊಳಿಸಲು ಸಹಾಯಕವಾಗಿದೆ. ಮೊದಲ ಉದ್ದೇಶವು, ಸಂರಕ್ಷಣೆಯಾಗಿದ್ದು, ವಿವರವಾದ ವರದಿಯನ್ನು **(ಅನುಬಂಧ-XI)**ರಲ್ಲಿ ನೀಡಲಾಗಿದೆ.

ಈ ವಿಷಯವನ್ನು ಮಂಡಳಿಯ ಮಾಹಿತಿಗಾಗಿ ಇದನ್ನು ಸಲ್ಲಿಸಲಾಗಿದೆ.

4. **ಜೀವವೈವಿಧ್ಯ ಅಧಿನಿಯಮ, 2002 ಮತ್ತು ಅದರ ಬಳಕೆ ಮತ್ತು ಲಾಭ ಹಂಚಿಕೆ ನಿಬಂಧನೆಗಳ ಬಗ್ಗೆ ಜಾಗೃತಿ ಕಾರ್ಯಗಾರ :**

15 ನೇ ಡಿಸೆಂಬರ್ 2017 ರಂದು ಬೆಂಗಳೂರಿನ ಪಶುವೈದ್ಯಕೀಯ ಕಾಲೇಜಿನಲ್ಲಿರುವ ನಂಜಯ್ಯ ಹಾಲ್‌ನಲ್ಲಿ ಸಾಮರ್ಥ್ಯ ಅಭಿವೃದ್ಧಿ ಭಾಗವಾಗಿ ಕರ್ನಾಟಕ ಜೀವವೈವಿಧ್ಯ ಮಂಡಳಿಯು 'ಜೈವಿಕ ವೈವಿಧ್ಯ ಅಧಿನಿಯಮ 2002 ಮತ್ತು ಅದರ ಬಳಕೆ ಮತ್ತು ಲಾಭ ಹಂಚಿಕೆಯ ನಿಬಂಧನೆಗಳ' ಬಗ್ಗೆ ಜಾಗೃತಿ ಕಾರ್ಯಗಾರವನ್ನು ಆಯೋಜಿಸಿದೆ. UNEP-GEF-MoEF-ABS ಯೋಜನೆಯು ಸಾರ್ವಜನಿಕ ಜಾಗೃತಿ ಪಠ್ಯಕ್ರಮ 'ಜೈವಿಕ ವೈವಿಧ್ಯತೆಯ ಅಧಿನಿಯಮ 2002ರ ಅನುಷ್ಟಾನವನ್ನು ಬಲಪಡಿಸುವುದು ಅದರ ಎಬಿಎಸ್ ನಿಬಂಧನೆಗಳ ಮೇಲೆ ಕೇಂದ್ರೀಕರಿಸಿದೆ'. ಸಮಾವೇಶದ ಮೂರು ವಿಶಾಲವಾದ ಉದ್ದೇಶಗಳನ್ನು ಅರ್ಥಮಾಡಿಕೊಳ್ಳಲು ಪ್ರೋಫೆಸರ್‌ಗಳು, ಉಪನ್ಯಾಸಕರು ಡಾಕ್ಟರಲ್/ಪೋಸ್ಟ್ ಡಾಕ್ಟರಲ್ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ಪದವೀಧರರ ನಡುವೆ ಜಾಗೃತಿ ಮೂಡಿಸುವ ಕಾರ್ಯಗಾರವಾಗಿರುತ್ತದೆ.

ಈ ವಿಷಯವನ್ನು ಮಂಡಳಿಯ ಮಾಹಿತಿಗಾಗಿ ಮಂಡಿಸಲಾಗಿದೆ.

**36/9 - Status of UNEP-GEF-MoEF-ABS Project on 'Strengthening the implementation of the Biological Diversity Act and Rules with focus on its Access and Benefit Sharing Provisions':**

1. **Kannada Brochure:**

   A ten page brochure was designed and developed by Karnataka Biodiversity Board under the UNEP-GEF-MoEF-ABS project in Kannada. It serves as a handy reference in understanding the Biological Diversity Act 2002 and its ABS Provisions in a nut shell.

   The matter is placed before the Board for information.

2. **ABS Prospectus:**

   The ABS-Prospectus provides a brief summary of the processes involved in scrutinizing applications by NBA and KBB in an easy to understand pictorial format. This handout also gives definitions of the relevant terminologies used and the snapshots of the forms available.

   This is submitted for the information of the Board.

3. **Interstate BMC exchange visit programme:**

   Karnataka Biodiversity Board organized a two day interstate BMC exchange visit to Kerala on 26$^{th}$ and 27$^{th}$ Sep' 2017 for BMC members of Karnataka from the twenty taluk panchayat BMCs constituted under UNEP-GEF-MoEF-ABS Project. The exchange visit helped the members to gain a better understanding of the practices of the Kerala state and the active role of biodiversity management committees to execute the three objectives of the Biological Diversity Act, 2002, with main focus on the first objective ie., conservation of bio-resources. Detailed report is submitted for the Board for information as (**Annexure-XI)**

4. **Awareness workshop on Biological Diversity Act, 2002 and its Access and Benefit Sharing Provisions:**

   One day Awareness workshop on "The Biological Diversity Act, 2002 and its Access and Benefit Sharing Provisions" was organised by Karnataka Biodiversity Board, on 15$^{th}$ of December, 2017 at the Dr. Nanjiah Hall, Veterinary College, Bengaluru, as part of the Capacity Building and Public awareness curriculum of UNEP-GEF-MoEF-ABS Project. The workshop aimed at creating awareness among the Professors, Lecturers, Doctoral/Post-doctoral students and post graduates in understanding the three objectives of the Convention on Biological Diversity and the Biological Diversity Act.

   The matter is put up for the Board for information.

**36/10 – ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆ ಹಾಗೂ ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯ ಪ್ರಗತಿ**.

1. ಪ್ರಸ್ತುತ ವರ್ಷದಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ 85 ಹಾಗು ತಾಲ್ಲೂಕು ಮಟ್ಟದಲ್ಲಿ 2 ಒಟ್ಟು 87 ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಲಾಗಿರುತ್ತದೆ. ಈವರೆಗೆ 6021 ಗ್ರಾಮ ಪಂಚಾಯತಿಗಳಲ್ಲಿ 4850 ಗ್ರಾಮ ಮಟ್ಟದ, 176 ತಾಲ್ಲೂಕುಗಳಲ್ಲಿ 131 ತಾಲ್ಲೂಕು ಮಟ್ಟದ ಹಾಗು 30 ಜಿಲ್ಲೆಗಳಲ್ಲಿ 14 ಜಿಲ್ಲಾ ಪಂಚಾಯತಿ ಮಟ್ಟದ ಒಟ್ಟು 4995 ಜೀವವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಲಾಗಿರುತ್ತದೆ.
2. ಪ್ರಸ್ತುತ ವರ್ಷದಲ್ಲಿ ಗ್ರಾಮ ಪಂಚಾಯತಿ ಮಟ್ಟದಲ್ಲಿ 117 ಹಾಗು 3 ತಾಲ್ಲೂಕು ಮಟ್ಟದಲ್ಲಿ ಒಟ್ಟು 120 ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸಲಾಗಿರುತ್ತದೆ. ಈವರೆಗೆ 1471 ಗ್ರಾಮ ಪಂಚಾಯತಿ ಮಟ್ಟದ ಹಾಗು 23 ತಾಲ್ಲೂಕು ಮಟ್ಟದ ಒಟ್ಟು 1494 ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ತಯಾರಿಸಲಾಗಿರುತ್ತದೆ.

ಈ ವಿಷಯವನ್ನು ಮಂಡಳಿಯ ಮಾಹಿತಿಗಾಗಿ ಮಂಡಿಸಲಾಗಿದೆ.

**36/10 - Status of Formation of Biodiversity Management Committees (BMC) and People's Biodiversity Registers (PBR):**

1. During the Current year, the Board has constituted 85 BMCs at Grama Panchayat level and 2 at Taluka Panchayath level and a total of 87 BMCs have been constituted. Till date 4850 BMCs out of 6021 GPs and 131 BMCs out of 176 TPs and 14 BMCs out of 30 ZPs, totalling to 4995 BMCs in the State.
2. During the current year 117 PBRs at Grama panchayat level and 3 at taluka level totalling to 120 People's Biodiversity registers have been prepared. Till date 1471 PBRs at GP level and 23 PBRs at TP level, totalling to 1494 PBRs have been prepared.

The subject is placed before the Board for information.

**36/11 - ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗು (ಅರಣ್ಯ ಕಾರ್ಯಪಡೆ ಮುಖ್ಯಸ್ಥರು) ಬೆಂಗಳುರು ರವರಿಗೆ ಗ್ರಾಮ ಅರಣ್ಯ ಸಮಿತಿ, ದೊಡ್ಡ ಪ್ರಮಾಣದ ಅದಿವಾಸಿ ವಿವಿದೋದ್ದೇಶ ಸಂಸ್ಥೆ ಅಥವಾ ಟೆಂಡರ್ ಮತ್ತು ಹರಾಜಿನಡಿಯಲ್ಲಿ ಜೈವಿಕ ಸಂಪನ್ಮೂಲಗಳನ್ನು ಅರಣ್ಯ ಉತ್ಪನ್ನಗಳ ಮಾರಾಟ ಪ್ರಕ್ರಿಯೆ ಕುರಿತು ಬರೆದ ಪತ್ರ**.

ರಾಜ್ಯ ಅರಣ್ಯ ಇಲಾಖೆಯಿಂದ ನಡೆಸಲಾಗುವ ಅರಣ್ಯ ಉತ್ಪನ್ನಗಳ ಟೆಂಡರ್ ಮತ್ತು ಹರಾಜಿನಡಿಯಲ್ಲಿ ಜೈವಿಕ ಸಂಪನ್ಮೂಲಗಳ ಬಳಸುತ್ತಿರುವಂತಹ ಬಿಡ್ಡರ್ಸ್ ಮತ್ತು ಟ್ರೇಡರ್ಸ್‌ಗಳೂ ಸಹ ಜೈವಿಕವೈವಿಧ್ಯ ಅಧಿನಿಯಮ 2002 ರಡಿಯ ಪರಿಧಿಯಲ್ಲಿ ಬರುತ್ತಾರೆಂದು ಸಂಬಂಧಪಟ್ಟವರಿಗೆ ಮಂಡಳಿಯ ಅಧ್ಯಕ್ಷರ ಮುಖಾಂತರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗು (ಅರಣ್ಯ ಕಾರ್ಯಪಡೆ ಮುಖ್ಯಸ್ಥರು)ರವರಿಗೆ ಸೂಚಿಸಬೇಕೆಂದು ಕೋರಲಾಗಿದೆ. ಈ ನಿಯಮವನ್ನು ಪಾಲಿಸದಿದ್ದಲ್ಲಿ ಜೈವಿಕವೈವಿಧ್ಯ ಅಧಿನಿಯಮ 2002ರಡಿಯಲ್ಲಿ ಅಂತಹವರಿಗೆ ಸಂಬಂಧಪಟ್ಟ ಅಧಿಕಾರಿಗಳು ಕಾನೂನು ರೀತ್ಯ ಕ್ರಮಕೈಗೊಳ್ಳಲು ತಿಳಿಸಲಾಗಿದೆ. **(ಅನುಬಂಧ–XII)**.

ಈ ವಿಷಯವನ್ನು ಮಂಡಳಿಗೆ ಮಾಹಿತಿಗಾಗಿ ಮಂಡಿಸಲಾಗಿದೆ.

**36/11 – Letter to PCCF (HoFF) Aranya, Bhawan, requesting support on the matter of trade of Forest Produce through Village Forest Committee, LAMPS or Tender cum-auction sale:**

A letter was addressed to the PCCF (HoFF) by the Chairman, KBB, with a request to direct the concerned officials to ensure that the provisions of the Biological Diversity Act 2002 are met by the bidders / traders who access forest bio-resources disposed off by the Forest Department through tenders / auction sales. The matter of penalties for non-compliance and the authorised officers to file complaints under Biological Diversity Act 2002 was also highlighted in the letter. (**Annexure-XII)**

The matter is placed before the Board for information.

**36/12** – **ಪಿಲಿಕುಳ ನಿಸರ್ಗಧಾಮದಲ್ಲಿ ಹರ್ಬೇರಿಯಂ ಮತ್ತು ಪಶ್ಚಿಮ ಘಟ್ಟಗಳ ಸಸ್ಯ ಪ್ರಬೇಧಗಳ ಸಂಗ್ರಹಾಲಯದ ಸ್ಥಾಪನೆ, ಕಡಲು ಮತ್ತು ಪಶ್ಚಿಮ ಘಟ್ಟಗಳ ಪವಿತ್ರ ವನಗಳ ಸಮೀಕ್ಷೆ ಮತ್ತು ವರದಿಯ ತಯಾರಿಕೆ:**

ದಿನಾಂಕ 27/11/2010 ಪತ್ರ ಸಂಖ್ಯೆ ಅಪಜೀ 54 ಇಸಿಡಿ 2009, ರಂತೆ ಕರ್ನಾಟಕ ಜೀವವೈವಿಧ್ಯ ಮಂಡಳಿಯಿಂದ ರೂ 120.00 ಲಕ್ಷಗಳ ಅನುದಾನದಡಿಯಲ್ಲಿ ಪಿಳಿಕುಳ ನಿಸರ್ಗಧಾಮದಲ್ಲಿ ಹರ್ಬೇರಿಯಂ ಮತ್ತು ಪಶ್ಚಿಮ ಘಟ್ಟಗಳ ಸಸ್ಯ ಪ್ರಬೇಧಗಳ ಸಂಗ್ರಹಾಲಯದ ಸ್ಥಾಪನೆ ಹಾಗೂ ಕಡಲು ಮತ್ತು ಪಶ್ಚಿಮ ಘಟ್ಟಗಳ ಪವಿತ್ರ ವನಗಳ ಸಮೀಕ್ಷೆ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯು 5 ವರ್ಷಗಳಿಗೆ ಮಂಜೂರಾಗಿದ್ದು ಅದನ್ನೂ ಇನ್ನೂ 2 ವರ್ಷಗಳವರೆಗೆ ಅಂದರೆ ಮಾರ್ಚ್ 2018ರವರೆಗೆ ಮುಂದುವರೆಸಲಾಗಿದೆ. ಸದರಿ ಯೋಜನೆಯ ಪ್ರಗತಿಯ ಪರಿಶೀಲನೆಯ ಬಗ್ಗೆ ತಾಂತ್ರಿಕ ಪರಿಣಿತ ಸಮಿತಿಯು ದಿನಾಂಕ 8/12/2017ರಂದು ಕ್ಷೇತ್ರ ಭೇಟಿಯನ್ನು ಮಾಡಿತು. ಈ ಸಂದರ್ಭದಲ್ಲಿ ಡಾ. ಶಣೈ, ಪ್ರಧಾನ ಸಂಶೋಧಕರು ಸಂರಕ್ಷಿತ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಲು ಹಾಗು ಸಸ್ಯ ಪ್ರಬೇಧಗಳ ಸಂಗ್ರಹಣೆಗೆ, ಅರಣ್ಯ ಇಲಾಖೆಯಿಂದ ಅನುಮತಿ ಇನ್ನೂ ದೊರೆತಿಲ್ಲದ ಕಾರಣ ಯೋಜನೆಯ ಪ್ರಗತಿಯಲ್ಲಿ ವಿಳಂಬವಾಗಿರುತ್ತದೆ. ಆದ್ದರಿಂದ ಈ ಯೋಜನೆಯನ್ನು ಪೂರ್ಣಗೊಳಿಸಲು ಡಿಸೆಂಬರ್ 2018ರವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರಿರುತ್ತಾರೆ.

ಈ ಯೋಜನೆಯ ಕಾಲಾವಧಿಯನ್ನು ವಿಸ್ತರಿಸಲು ಹಾಗು ಅರಣ್ಯ ಇಲಾಖೆಯಿಂದ ಅನುಮತಿ ದೊರಕಿಸುವ ವಿಷಯದ ಬಗ್ಗೆ ಮಂಡಳಿಯ ಸೂಕ್ತ ನಿರ್ಧಾರಕ್ಕಾಗಿ ಮಂಡಿಸಲಾಗಿದೆ.

**36/12 - Project titled "Establishment of Herbarium and Botanical Museum of the plants of Western Ghats and Survey, identification and preparation of report on sacred groves in Coastal and Western Ghats region.":**

Karnataka Biodiversity Board has sanctioned the project titled "Establishment of Herbarium and Botanical Museum of plants of Western Ghats of Pilikula Nisargadhama" for the grant of Rs. 120.00 lakhs vide order: APAJI 54 ECO 2009, dated: 27/11/2010. The project was sanctioned for a period of 5 years which was extended for an additional period of two years i.e., till March, 2018. The Technical Expert Committee recently visited the

project site for review on the project progress during which Dr. Shenoy, Principal Investigator expressed that there has been a delay in getting access to Protected Areas (PA) for specimen collection as a result, the desired number of specimen collection may not be attained by the end of March, 2018. Hence, Dr. Shenoy requested the committee for extension of the project period till December, 2018.

The matter is placed before the Board for suitable decision regarding extension of the project and for discussion regarding permission to enter Protected Areas for establishment of Herbarium.

### 36/13: ಕರ್ನಾಟಕ ಜೀವವೈವಿಧ್ಯ ಮಂಡಳಿಯ ವಾಹನ ಸಂ: ಕೆಎ-04-ಎಂಬಿ-6160ವನ್ನು ನಿರುಪಯುಕ್ತಗೊಳಸುವ ಬಗ್ಗೆ:

ದಿನಾಂಕ 07/04/2016ರಂದು ನಡೆದ ಮಂಡಳಿಯ 31ನೇ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ, ಸರ್ಕಾರದ ಕಾರ್ಯದರ್ಶಿಗಳು (ಜೀವಿಪರಿಸ್ಥಿತಿ ಮತ್ತು ಪರಿಸರ) ರವರಿಗೆ ಪತ್ರ ಸಂ ಎಸಿಟಿ/ಬಿ04/ಟಿಎಎಸ್/53/251 ದಿನಾಂಕ 31/05/2016 ಹಾಗು ಪತ್ರ ಸಂ ಎಸಿಟಿ/ಬಿ04/ಟಿಎಎಸ್/53/361 ದಿನಾಂಕ 04/12/2017 ರಂದು ಕರ್ನಾಟಕ ಜೀವವೈವಿಧ್ಯ ಮಂಡಳಿಯ ಟಾಟಾ ಸುಮೋ ವಾಹನ ಸಂ: ಕೆಎ-04-ಎಂಬಿ-6160ವನ್ನು ಬದಲಾಯಿಸಲು ಹಾಗು ನಿರುಪಯುಕ್ತಗೊಳಸಲು ಪತ್ರ ಬರೆಯಲಾಗಿತ್ತು. **(ಅನುಬಂಧ-XIII)**

ಇದಕ್ಕೆ ಉತ್ತರವಾಗಿ ಸರ್ಕಾರದ ಕಾರ್ಯದರ್ಶಿಗಳು (ಜೀವಿಪರಿಸ್ಥಿತಿ ಮತ್ತು ಪರಿಸರ) ಪತ್ರ ಸಂ ಅಪಜೀ 217 ಇಎನ್‌ವಿ 2017 ದಿನಾಂಕ 12/12/2017ರ ಪತ್ರದಲ್ಲಿ ವಾಹನವನ್ನು ಮಂಡಳಿಯ ಮಟ್ಟದಲ್ಲಿಯೇ ನಿರುಪಯುಕ್ತಗೊಳಸಲು ತಿಳಿಸಿರುತ್ತಾರೆ. **(ಅನುಬಂಧ-XIV)**

ಈ ವಿಷಯವನ್ನು ಮಂಡಳಿಯ ಅನುಮತಿಯ ನಿರ್ಧಾರಕ್ಕಾಗಿ ಮಂಡಿಸಲಾಗಿದೆ.

### 36/13 – Condemnation of Karnataka Biodiversity Board Vehicle bearing No. KA-04-MB-6160:

As resolved by the 31st Board meeting held on 07/04/2016 letter was written to Secretary, (Ecology and Environment) vide letter No.ACT.B04/TAS/53/251 dt 31/05/2016 and vide letter No: ACT.B04/TAS/53/361 dt 04/12/2017 request for to replace and condemnation of the Vehicle Tata Sumo bearing No. KA-04-MB-6160. **(Annexure –XIII).**

In response to this, Government vide No. FEE 217 ENV 2017 dt 12/12/2017 has informed that the decision on condemnation of the vehicle has to be taken at the level of Board itself. **(Annexure –XIV).**

The matter is placed before the Board for decision on permission.

**Sd/-**

**Member Secretary.**

**Karnataka Biodiversity Board**